₹ 4
ಸಂಪುಟ: 2 ಸಂಚಿಕೆ: 250 ಪುಟಗಳು: 14+4
13.09.2017 ಬುಧವಾರ
ಬೆಂಗಳೂರು । ಹುಬ್ಬಳ್ಳಿ । ಮಂಗಳೂರು
ದಾವಣಗೆರೆ । ಕಲಬುರಗಿ । ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ
ಜನರಿಗೆ ನಿಮ್ಮ ತಲೆಯೊಳಗಿರುವ ಪ್ಲ್ಯಾನುಗಳೇನು ಎಂಬುದನ್ನು ಹೇಳಬೇಡಿ. ಅಂದುಕೊಂಡಿರುವುದನ್ನು ಮಾಡಿ ತೋರಿಸಿ. ಅವರೇ ಆಗ ಅದನ್ನು ಎಲ್ಲರಿಗೂ ಹೇಳುತ್ತಾರೆ.

ಹೆಚ್ಚು ನ್ಯೂಸು ಕಡಿಮೆ ಕಾಸು
ವಿಶ್ವವಾಣಿ ₹ 4
ಶುಕ್ರವಾರ, ಭಾನುವಾರ ಹೊರತುಪಡಿಸಿ

# ವಿಶ್ವವಾಣಿ
ವಿಶ್ವಾಸವೇ ವಿಶ್ವ




ದಿಟ್ಟ ಪತ್ರಕರ್ತೆಯೋ ಕೆಟ್ಟ ಪತ್ರಕರ್ತೆಯೋ ನೀವೇ ನಿರ್ಧರಿಸಿ
6

ವಿನಾಯಕ ಭಟ್ ಮೂರೂರು

ಗದ್ದರ್‌ನೇ ಗದ್ದುಗೆ ಬೇಕೆಂದ ಮೇಲೆ ಇವರದ್ಯಾವ ಗದ್ದಲ ಸ್ವಾಮಿ?
7

ರವೀಂದ್ರ ಜೋಶಿ

ನಕ್ಸಲ್ ವಿಶ್ವರೂಪ-2
ಕೈಯಲ್ಲಿರುವುದು ಸುತ್ತಿಗೆಯಾದರೆ ಕಾಣುವುದೆಲ್ಲ ಮೊಳೆಯೇ!
ರೋಹಿತ್ ಚಕ್ರತೀರ್ಥ 7

ಸಿದ್ಧಗಂಗಾ ಮಠಾಧೀಶ ಡಾ.ಶಿವಕುಮಾರ ಸ್ವಾಮೀಜಿ ಸ್ಪಷ್ಟನೆ

# ವೀರಶೈವ, ಲಿಂಗಾಯತ ಒಂದೇ

## ಲಿಂಗಾಯತ ಧರ್ಮಕ್ಕೆ ಬೆಂಬಲ ಎಂದಿದ್ದು ನಿಜ: ಎಂ.ಬಿ.ಪಾಟೀಲ್

**ವಿಶ್ವವಾಣಿ ಸುದ್ದಿಮನೆ** ತುಮಕೂರು/ ವಿಜಯಪುರ

ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಬೆಂಬಲ ಕುರಿತ ಹೇಳಿಕೆಗೆ ಸ್ಪಷ್ಟನೆ ನೀಡಿರುವ ತುಮಕೂರು ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರು, 'ಲಿಂಗಾಯತ ಹಾಗೂ ವೀರಶೈವ ಎರಡೂ ಒಂದೇ ಆಗಿದೆ' ಎಂದು ತಿಳಿಸಿದ್ದಾರೆ. 'ಶ್ರೀಗಳು ನನ್ನೊಂದಿಗೆ ಲಿಂಗಾಯತ ಪ್ರತ್ಯೇಕ ಧರ್ಮವಾಗಲಿ ಎಂದಿದ್ದು ಸತ್ಯ, ಈ ಬಗ್ಗೆ ಮಠಕ್ಕೇ ಹೋಗಿ ಪ್ರಮಾಣ ಮಾಡಲು ಸಿದ್ಧ' ಎಂದು ಸಚಿವ ಎಂ.ಬಿ.ಪಾಟೀಲ್ ಹೇಳಿದ್ದಾರೆ.

ಲಿಂಗಾಯತ ಧರ್ಮಕ್ಕೆ ಸಿದ್ಧಗಂಗಾ ಸ್ವಾಮೀಜಿ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಸಚಿವ ಪಾಟೀಲ್ ನೀಡಿದ್ದ ಹೇಳಿಕೆ ತೀವ್ರ ಸ್ವರೂಪ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಸ್ವಾಮೀಜಿ ಮಂಗಳವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಅದರ ಪೂರ್ಣಪಾಠ ಇಂತಿದೆ: 'ದಿ.10.09.2017ರಂದು ಕರ್ನಾಟಕ ರಾಜ್ಯದ ಜಲ ಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ.ಪಾಟೀಲರು ಶ್ರೀ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದಾಗ ಅವರು ನಮ್ಮೊಡನೆ ವೀರಶೈವ/ಲಿಂಗಾಯತ ಸ್ವತಂತ್ರ ಧರ್ಮದ ವಿಷಯದ ಬಗ್ಗೆ ಚರ್ಚಿಸಿದಾಗ ವೀರಶೈವ ಎಂಬ ಪದ ವಿದ್ಯಾವಂತರು ಮತ್ತು ನಗರ ಪ್ರದೇಶದಲ್ಲಿ ಬಳಕೆಯಲ್ಲಿದೆ. ಲಿಂಗಾಯತ ಎಂಬ ಪದ ಗ್ರಾಮೀಣ ಪ್ರದೇಶದಲ್ಲಿ ಬಳಕೆಯಲ್ಲಿದ್ದು, ಈ ಎರಡೂ ಪದಗಳು ಒಂದೇ ಆಗಿದ್ದು, ಎಲ್ಲಾ ಧಾರ್ಮಿಕ ಮುಖಂಡರು ಹಾಗೂ ಸಮಾಜ ಬಾಂಧವರು ಒಂದೆಡೆ ಕುಳಿತು ಸರ್ವಸಮ್ಮತವಾದ ನಿರ್ಧಾರ ಕೈಗೊಳ್ಳುವುದು ಸೂಕ್ತ ಎಂದು ನಮ್ಮ ಅಭಿಪ್ರಾಯ ತಿಳಿಸಿರುತ್ತೇವೆ.

→ 5



ಸಚಿವ ಎಂ.ಬಿ. ಪಾಟೀಲ್ ಹೇಳಿಕೆ ಹಿನ್ನೆಲೆಯಲ್ಲಿ ಶ್ರೀಮಠಕ್ಕೆ ಭೇಟಿ ನೀಡಿದ್ದು, ಏಕಾಂತದಲ್ಲಿದ್ದಾಗ ಶ್ರೀಗಳನ್ನು ಮಾತನಾಡಿಸಿದೆ. ನಾನು ಯಾವ ಪಂಥಕ್ಕೂ ಸೇರಿದವನಲ್ಲ. ವೀರಶೈವ-ಲಿಂಗಾಯತ ಎರಡೂ ಒಂದೇ. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.
- **ಜಿ.ಎಸ್.ಬಸವರಾಜು** ಮಾಜಿ ಸಂಸದ



### ಮುಖಂಡರ ಭೇಟಿ

ವೀರಶೈವ-ಲಿಂಗಾಯತ ಪ್ರತ್ಯೇಕ ಧರ್ಮ ವಿಚಾರ ಕುರಿತು ಸಿದ್ಧಗಂಗಾ ಮಠದಲ್ಲಿ ಮಂಗಳವಾರ ಸಂಜೆ ಶಾಮನೂರು ಶಿವಶಂಕರಪ್ಪ, ಸಚಿವ ಈಶ್ವರ ಖಂಡ್ರೆ ಸೇರಿದಂತೆ ವೀರಶೈವ ಮಹಾಸಭಾ ಮುಖಂಡರು ಸಿದ್ಧಗಂಗಾ ಶ್ರೀಗಳ ಜತೆ ಸುಮಾರು ಮುಕ್ಕಾಲು ತಾಸು ಚರ್ಚೆ ನಡೆಸಿದರು. ಬಳಿಕ ಮಠದಿಂದ ಬಿಡುಗಡೆ ಮಾಡಲಾದ ಪರಿಷ್ಕೃತ ಪತ್ರಿಕಾ ಹೇಳಿಕೆಯಲ್ಲಿ ಮಹಾಸಭಾ ನಿಲುವಿಗೆ ಸ್ವಾಮೀಜಿ ಬೆಂಬಲ ವ್ಯಕ್ತಪಡಿಸಿದ್ದಾರೆ.



### ಸ್ವಾಮೀಜಿ ಸಿಡಿಯಿದೆ

'ನನ್ನನ್ನು ಸರ್ವನಾಶ ಮಾಡುವುದಾಗಿ ಸ್ವಾಮೀಜಿಯೊಬ್ಬರು ಮಾತನಾಡಿದ್ದಾರೆ. ಈ ವಿಡಿಯೊ ಸಿಡಿ ನನ್ನ ಬಳಿ ಇದ್ದು, ಇದನ್ನು ಬಹಿರಂಗಪಡಿಸಿದರೆ ಸ್ವಾಮೀಜಿ ಜೈಲಿಗೆ ಹೋಗುವುದು ಗ್ಯಾರಂಟಿ. ಅವರನ್ನು ಕಂಬಿ ಹಿಂದೆ ಕಳಿಸಿದ ಅಪವಾದ ಹೊರಲು ನಾನು ಸಿದ್ಧನಿಲ್ಲ. ನನಗೆ ಯಾವುದೇ ಬೆದರಿಕೆಯಿಲ್ಲ. ನನಗೆ ಯಾವ ಭದ್ರತೆಯು ಬೇಕಿಲ್ಲ. ಯಾವ ಬೆದರಿಕೆಗೂ ನಾನು ಜಗ್ಗಲ್ಲ' ಎಂದು ಎಂ.ಬಿ.ಪಾಟೀಲ್ ಹೇಳಿದ್ದಾರೆ.

ನಾನು ನನ್ನ ಕುಟುಂಬ ಸಮೇತ ಸಿದ್ಧಗಂಗಾ ಮಠಕ್ಕೆ ಹೋಗಿ ಬೇಕಾದರೂ ಪ್ರಮಾಣ ಮಾಡುತ್ತೇನೆ. ನಾನು ಸುಳ್ಳು ಹೇಳಿಲ್ಲ. ನಾನು ಸುಳ್ಳು ಮಾತನಾಡಿದ್ದರೆ ನಮ್ಮ ಕುಟುಂಬವೇ ಸರ್ವನಾಶವಾಗಲಿ.
- **ಎಂ.ಬಿ.ಪಾಟೀಲ್** ಜಲ ಸಂಪನ್ಮೂಲ ಸಚಿವ

### ಸುಳ್ಳು ಹೇಳಿದ್ರೆ ಕುಟುಂಬ ನಾಶವಾಗಲಿ

ಸಿದ್ಧಗಂಗಾ ಶ್ರೀಗಳು ಲಿಂಗಾಯತ ಪ್ರತ್ಯೇಕ ಧರ್ಮವಾಗಲಿ ಎಂದದ್ದು ಸತ್ಯ. ನಾನು ಸುಳ್ಳು ಮಾತನಾಡಿದ್ದರೆ ನಮ್ಮ ಕುಟುಂಬವೇ ಸರ್ವನಾಶವಾಗಲಿ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶ್ರೀಗಳ ಹೇಳಿಕೆಯನ್ನು ನಾನು ಸ್ಪಷ್ಟವಾಗಿ ಅರ್ಥೈಸಿಕೊಂಡಿದ್ದೇನೆ. ಆದರೆ ತುಮಕೂರಿನ ಮಾಜಿ ಸಂಸದ ಬಸವರಾಜ್, ಮಾಜಿ ಸಿಎಂ ಯಡಿಯೂರಪ್ಪ, ವಿ. ಸೋಮಣ್ಣ ತಪ್ಪು ಅರ್ಥ ಕಲ್ಪಿಸುತ್ತಿದ್ದಾರೆ' ಎಂದು ಹೇಳಿದರು.

ಯಡಿಯೂರಪ್ಪನವರು ಜೈಲಿಗೆ ಹೋದಾಗ ವಿ.ಸೋಮಣ್ಣನವರು ಸಿದ್ಧಗಂಗಾ ಶ್ರೀಗಳನ್ನು ಜೈಲು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಭೇಟಿ ಮಾಡಿಸಿ, ಶ್ರೀಗಳನ್ನು ಸಣ್ಣವರನ್ನಾಗಿ ಮಾಡಿದ್ದರು. ಈಗಲೂ ಅದೇ ಕೆಲಸವನ್ನು ಮಾಡಲಾಗುತ್ತಿದೆ. ಶ್ರೀಗಳು ಹೇಳಿದ್ದನ್ನು ತಿರುಚಿ ಈಗಲೂ ಸಣ್ಣವರನ್ನಾಗಿ ಮಾಡಲು ಯತ್ನಿಸುತ್ತಿದ್ದಾರೆ. ಹೀಗೇನಾದರೂ ಮಾಡಿದರೆ ಶ್ರೀಗಳ ಘನತೆ ಕುಸಿದಂತಾಗುತ್ತದೆ. ಮಠದ ಮರ್ಯಾದೆ ಮಣ್ಣುಪಾಲು ಮಾಡಿದಂತಾಗುತ್ತದೆ ಎಂದರು.

# ಹಿಂದುತ್ವ ಹಳಿಯಲು ವೇದಿಕೆಯಾದ ನಾನು ಗೌರಿ ಪ್ರತಿರೋಧ ಸಮಾವೇಶ

## ಆರ್‌ಎಸ್‌ಎಸ್ ಮತ್ತು ನರೇಂದ್ರ ಮೋದಿಯೇ ಟಾರ್ಗೆಟ್



ಸಮಾವೇಶಕ್ಕೂ ಮುನ್ನ ಮೆಜೆಸ್ಟಿಕ್‌ನಿಂದ ಸೆಂಟ್ರಲ್ ಕಾಲೇಜು ಮೈದಾನದವರೆಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಹೋರಾಟಗಾರ್ತಿಯರಾದ ಕೆ.ನೀಲಾ, ಮೇಧಾ ಪಾಟ್ಕರ್ ಭಾಗವಹಿಸಿದ್ದರು.

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಗೌರಿ ಲಂಕೇಶ್ ಹತ್ಯೆ ಖಂಡಿಸಿ ಪ್ರಗತಿಪರರು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿರೋಧ ಸಮಾವೇಶ ಗೌರಿ ಲಂಕೇಶ್ ಹತ್ಯೆ ಆರೋಪಿಗಳನ್ನು ಬಂಧಿಸಲು ಒತ್ತಾಯ ಮಾಡುವ ಬದಲು ಹಿಂದುತ್ವ, ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್ ಮತ್ತು ಇತರ ಹಿಂದೂ ಪರ ಸಂಘಟನೆಗಳನ್ನು ಹಳಿಯುವ ವೇದಿಕೆಯಾಗಿ ಮಾರ್ಪಟ್ಟಿತ್ತು.

ಭಾಷಣಕ್ಕೆ ನಿಂತ ಪ್ರತಿಯೊಬ್ಬರೂ ಮೋದಿ ಮತ್ತು ಹಿಂದುತ್ವದ ಮೇಲೆ ಟೀಕಾ ಪ್ರಹಾರ ಮಾಡಿದರೇ ವಿನಾ ಗೌರಿ ಹತ್ಯೆಗೆ ನಿಜವಾದ ಸಂತಾಪ ಸೂಚಿಸಲೇ ಇಲ್ಲ. ಪನ್ಸಾರೆ, ದಾಬೋಲ್ಕರ್, ಕಲಬುರ್ಗಿ ಹತ್ಯೆಗಳೂ ಮತ್ತೆಮತ್ತೆ ಪ್ರಸ್ತಾಪವಾದವು. 'ರೋಹಿತ್ ವೇಮುಲ ಮತ್ತು ಕನ್ನಯ್ಯ ಕುಮಾರ್ ಅಂತಹ ಯುವ ನಾಯಕರ ಕೈಯ್ಯಲ್ಲಿಯೇ ದೇಶದ ಭವಿಷ್ಯ ಇದೆ' ಎಂದು ಹಾಡಿ ಹೊಗಳಲಾಯಿತು.


ಗೌರಿ ಹತ್ಯೆ
8 ದಿನ

ಲಕ್ಷಾಂತರ ಮಂದಿ ಬೆಂಬಲಿಗರನ್ನು ಕರೆತರುತ್ತೇನೆ ಎಂದಿದ್ದ ಸಂಘಟಕರು ಕಲಬುರಗಿ, ಬಳ್ಳಾರಿ ಕಡೆಯ ತಾಂಡಾಗಳಿಂದ ಜನರನ್ನು ರೈಲಿನಲ್ಲಿ ಕರೆಸಿದ್ದರೆ ಬೆಂಗಳೂರು ಅಕ್ಕಪಕ್ಕದದಿಂದ ಬಸ್‌ನಲ್ಲಿ ಕರೆತರಲಾಗಿತ್ತು. ವಿವಿಧ ಕಾಲೇಜು ವಿದ್ಯಾರ್ಥಿ ಸಂಘಟನೆಗಳನ್ನು ಬಳಸಿಕೊಂಡಿದ್ದು ಕಂಡುಬಂತು.

ಸಮಾವೇಶಕ್ಕೆ ಆಗಮಿಸಿದ್ದ ಮಹಿಳೆಯರಿಗೆ ತಾವು ಯಾಕಾಗಿ ಬಂದಿದ್ದೇವೆ ಎಂಬ ವಿಚಾರವೂ ಗೊತ್ತಿರಲಿಲ್ಲ. 'ನಮ್ಮವರೊಬ್ಬರು ಹೇಳಿದಂತೆ ರೈಲಿನಲ್ಲಿ ಬಂದಿದ್ದೇವೆ' ಎಂದು ಮಹಿಳೆಯೊಬ್ಬರು ತಿಳಿಸಿದರು.

**ರಾಜ್ಯದ ಬುದ್ಧಿಜೀವಿಗಳಿಗೆ ಅವಕಾಶವಿಲ್ಲ:** ಬೆಂಗಳೂರಿನಲ್ಲಿಯೇ ಸಮಾವೇಶ ನಡೆದರೂ ರಾಜ್ಯದ ಬುದ್ಧಿಜೀವಿಗಳಿಗೆ ಮಾತನಾಡಲೂ ಅವಕಾಶವೇ ಸಿಗಲಿಲ್ಲ. ಸೀತಾರಾಂ ಯಚೂರಿ, ತೀಸ್ತಾ ಸೆಟಲ್‌ವಾಡ್, ಮೇಧಾ ಪಾಟ್ಕರ್‌ರಂಥವರು ಸಾಕಷ್ಟು ಮಾತನಾಡಿದರು. ಮಾತಿನ ಉದ್ದಕ್ಕೂ ತನಿಖೆಗೆ ಆಗ್ರಹಿಸುವ ಬದಲು 'ಕೋಮುವಾದಿ' ಗಳು ಎನ್ನುತ್ತಲೇ ಸಾಗಿದರು. ಜ್ಞಾನಪೀಠ ಪುರಸ್ಕೃತ ಸಾಹಿತಿ ಗಿರೀಶ್ ಕಾರ್ನಾಡ್, ಅಗ್ನಿಶ್ರೀಧರ್‌ಗೆ ಮಾತನಾಡಲು ಅವಕಾಶವೇ ದೊರೆಯಲಿಲ್ಲ.

**ಪಕ್ಷಗಳ ಬೆಂಬಲ:** ಮನವಿ ಸ್ವೀಕರಿಸುವ ನೆಪದಲ್ಲಿ ಸಾರಿಗೆ ಸಚಿವ ಎಚ್.ಎಂ. ರೇವಣ್ಣ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಯು.ಟಿ.ಖಾದರ್ ಆಗಮಿಸಿದ್ದರು. ಆಮ್ ಆದ್ಮಿ ಪಾರ್ಟಿ ಕರ್ನಾಟಕ, ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆ ಬೆಂಬಲಿಗರು ಸಮಾವೇಶದುದ್ದಕ್ಕೂ ಕಾಣಿಸಿದರು.

### ಸಮಾವೇಶ ಸಾರಿದ್ದೇನು?

ಮಹಾತ್ಮ ಗಾಂಧಿಜೀಯವರನ್ನು ಹತ್ಯೆ ಮಾಡಿದವರೆ ಗೌರಿ ಲಂಕೇಶ್ ಹತ್ಯೆ ಮಾಡಿದ್ದಾರೆ. ಸಮಾನತೆಗೆ ಅವಕಾಶವೇ ದೇಶದಲ್ಲಿ ಇಲ್ಲ, ವಿಚಾರವಾದಿಗಳ ಬದುಕುವ ಹಕ್ಕು ಕಸಿದುಕೊಳ್ಳಲಾಗುತ್ತಿದೆ, ಕೋಮುವಾದಿಗಳ ಕೈಗೆ ಅಧಿಕಾರ ಕೊಟ್ಟು ನಾವು ಅನುಭವಿಸುತ್ತಿದ್ದೇವೆ. ಸನಾತನ ಧರ್ಮದ ಹೆಸರಿನಲ್ಲಿ ನಮ್ಮನ್ನು ತುಳಿಯಲಾಗುತ್ತಿದೆ, ಗೌರಿ ಹತ್ಯೆ ಬಗ್ಗೆ ಮಾತನಾಡದ ಮೋದಿ ಎಲ್ಲಿದ್ದಾರೆ? ಎಂಬ ಹಳೆಯ ಹಳಸಿದ ಹೇಳಿಕೆಗಳೇ ಸಮಾವೇಶದಲ್ಲಿ ವಿಜೃಂಭಿಸಿದವು. 50 ಸಾವಿರ-ಲಕ್ಷ ಜನರನ್ನು ಸೇರಿಸುತ್ತೇವೆ ಎಂದು ಸಾಮಾಜಿಕ ತಾಣದಲ್ಲಿ ಕೊಚ್ಚಿಕೊಂಡಿದ್ದವರ ಮುಖ ಸಮಾವೇಶಕ್ಕೆ ಸೇರಿದ್ದ ಜನಸಮೂಹ ನೋಡಿ ಪೆಚ್ಚಾಗಿರುವುದಂತೂ ಸತ್ಯ. ಎಡ ಪಕ್ಷಗಳು, ಎಸ್‌ಡಿಪಿಐ ಕಾರ್ಯಕರ್ತರು, ಬುದ್ಧಿಜೀವಿಗಳನ್ನು ಬಿಟ್ಟರೆ ಯಾವುದೋ ಊರಿನಿಂದ ಕರೆತಂದಿದ್ದ ತಾಂಡಾ ಮಹಿಳೆಯರು, ಕಾಲೇಜಿಗೆ ಚಕ್ಕರ್ ಹಾಕಿದ್ದ ವಿದ್ಯಾರ್ಥಿಗಳ ಹೊರತಾಗಿ ಸ್ವಯಂ ಪ್ರೇರಿತವಾಗಿ ಬಂದವರೂ ಬಹಳ ಕಡಿಮೆ ಇದ್ದರು.

### ಖಾಲಿ ಕುರ್ಚಿಗಳು

ಐದು ಸಾವಿರ ಜನರಿಗೆ ಆಸನ ವ್ಯವಸ್ಥೆ ಮಾಡಿದ್ದ ಸೆಂಟ್ರಲ್ ಕಾಲೇಜು ಮೈದಾನ ತುಂಬಲೇ ಇಲ್ಲ. ಸಮಾವೇಶಕ್ಕೆ ಕರೆತಂದಿದ್ದ ಜನರು ಭಾಷಣ ಕೇಳುವುದನ್ನು ಬಿಟ್ಟು ಮರದ ನೆರಳಿನಲ್ಲಿ ಆಶ್ರಯ ಪಡೆದುಕೊಳ್ಳುತ್ತಿದ್ದರು. ಕೊನೆಯ ಸಾಲಿನ ಕುರ್ಚಿಗಳನ್ನು ಸುಮ್ಮನೆ ಹಾಕಿ ತೆಗೆಯಬೇಕಾಯಿತು.

### ಮೊಳಗಿದ ನಕ್ಸಲಿಸಂ ಗೀತೆ

ವೇದಿಕೆ ಮೇಲೆ ಕೆಲ ಮಾಜಿ ನಕ್ಸಲರು ಕಾಣಿಸಿಕೊಂಡಿದ್ದು ವಿಶೇಷ. ಭಾಷಣದ ನಂತರ ಒಂದು ಗೀತೆ ಹಾಡುವ ಪರಿಪಾಠ ಸಮಾವೇಶದ ಉದ್ದಕ್ಕೂ ಇತ್ತು. ಎಲ್ಲವೂ ಸಮಾನತೆ ಎಂಬ ಹೆಸರಿನ ನಕ್ಸಲಿಸಂ ಸಾರುವ ಗೀತೆಗಳಾಗಿದ್ದು ಇಲ್ಲಿಯೂ ಹಿಂದುತ್ವ ಎಂಬುದನ್ನೇ ಗುರಿಯಾಗಿರಿಸಿಕೊಳ್ಳಲಾಗಿತ್ತು. ಇಂಗ್ಲಿಷ್ ಗೀತೆಯೊಂದನ್ನು ಹಾಡಿದ ನಂತರ ವೇದಿಕೆ ಕೆಳಗಿದ್ದ ಹಿರಿಯರೊಬ್ಬರು ಈ ಗೀತೆ ಬೇಕಿತ್ತಾ? ಎಂದು ಮೂರ್ನಾಲ್ಕು ಸಾರಿ ಪ್ರಶ್ನೆ ಮಾಡಿದ್ದು ಕಂಡುಬಂತು.

### ಗೌರಿ ಹತ್ಯೆ ಮುಕ್ತ ಚರ್ಚೆಗೆ ಆಹ್ವಾನ

ಈಗಾಗಲೇ 'ವಿಶ್ವವಾಣಿ'ಯಲ್ಲಿ ಗೌರಿ ಲಂಕೇಶ್ ಹತ್ಯೆ ಕುರಿತು ಸಾಕಷ್ಟು ಲೇಖನಗಳು, ವಿಶೇಷ ವರದಿಗಳು ಪ್ರಕಟವಾಗಿವೆ. ಈ ಕುರಿತು ಮುಕ್ತಚರ್ಚೆಗೆ ಪತ್ರಿಕೆ ಆಹ್ವಾನ ನೀಡುತ್ತದೆ. ಯಾರು ಬೇಕಾದರೂ ತಮ್ಮ ಅಭಿಪ್ರಾಯವನ್ನು ಇಲ್ಲಿ ಮಂಡಿಸಬಹುದು.



ನಮ್ಮ ವಿಳಾಸ: **ವಿಶ್ವವಾಣಿ ದಿನಪತ್ರಿಕೆ**
2 ಮತ್ತು 3ನೇ ಮಹಡಿ, ನಂ.915,
ಧನುಷ್ ಪ್ಲಾಜಾ, ಐಡಿಯಲ್ ಹೋಮ್ಸ್ ಟೌನ್‌ಶಿಪ್, ರಾಜರಾಜೇಶ್ವರಿ ನಗರ,
ಬೆಂಗಳೂರು– 560098
editoped@vishwavani.news

### ಮೈಸೂರಿನಲ್ಲಿ 83ನೇ ಸಾಹಿತ್ಯ ಸಮ್ಮೇಳನ

**ಬೆಂಗಳೂರು:** 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನ.24 ರಿಂದ 26ರವರೆಗೆ ಮೈಸೂರಿನಲ್ಲಿ ನಡೆಯಲಿದೆ. ಡಿಸೆಂಬರ್‌ನಲ್ಲಿ ನಡೆಯುವ ವಿಶ್ವ ಕನ್ನಡ ಸಮ್ಮೇಳನಕ್ಕೂ ಮುನ್ನವೇ ಸಾಹಿತ್ಯ ಸಮ್ಮೇಳನ ನಡೆಸಲು ಉದ್ದೇಶಿಸಲಾಗಿದೆ ಎಂದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮನು ಬಳಿಗಾರ್ ತಿಳಿಸಿದ್ದಾರೆ.

### ಕೇಂದ್ರ ನೌಕರರ ತುಟ್ಟಿಭತ್ಯೆ ಏರಿಕೆ

**ದೆಹಲಿ:** ಕೇಂದ್ರ ಸರಕಾರಿ ನೌಕರರು ಮತ್ತು ಪಿಂಚಣಿದಾರರ ತುಟ್ಟಿ ಭತ್ಯೆ (ಡಿ.ಎ)ಯನ್ನು ಶೇ. 1ರಷ್ಟು ಏರಿಕೆ ಮಾಡಲು ಕೇಂದ್ರ ಸರಕಾರ ಮಂಗಳವಾರ ಸಮ್ಮತಿಸಿದೆ.



ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ತುಟ್ಟಿ ಭತ್ಯೆಯನ್ನು ಶೇ. 4ರಿಂದ ಶೇ. 5ಕ್ಕೆ ಹೆಚ್ಚಿಸುವ ಪ್ರಸ್ತಾವನೆಗೆ ಅಂಗೀಕಾರ ದೊರೆತಿದೆ. ಬೆಲೆ ಏರಿಕೆ ಕಾರಣದಿಂದ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಜುಲೈ ಒಂದರಿಂದ ಅನ್ವಯವಾಗುವಂತೆ ಭತ್ಯೆಯನ್ನು ಏರಿಕೆ ಮಾಡಲಾಗಿದೆ ಎಂದು ಸರಕಾರ ತಿಳಿ ಸಿದೆ. ತೆರಿಗೆ ರಹಿತ ಗ್ರ್ಯಾಚುಟಿ ಮೊತ್ತವನ್ನು 20 ಲಕ್ಷ ರು.ಗೆ ಏರಿಕೆ ಮಾಡುವ ಗ್ರ್ಯಾಚುಟಿ ಪಾವತಿ ತಿದ್ದುಪಡಿ ವಿಧೇಯಕ 2017ಕ್ಕೂ ಸಚಿವ ಸಂಪುಟದ ಅಂಗೀಕಾರ ದೊರೆತಿದೆ.

ತುಟ್ಟಿಭತ್ಯೆ ಏರಿಕೆಯಿಂದ 49.26 ಲಕ್ಷ ನೌಕರರು, 61.17 ಲಕ್ಷ ಪಿಂಚಣಿದಾರರಿಗೆ ಲಾಭ ಶಗಲಿದೆ. ಸರಕಾರದ ಬೊಕ್ಕಸಕ್ಕೆ ಪ್ರತಿ ವರ್ಷ 3,068 ಕೋಟಿ ರು. ಹೊರೆಯಾಗಲಿದೆ.

# ಕುಟುಂಬ ರಾಜಕಾರಣದಿಂದ ಕಾಂಗ್ರೆಸ್ ಮುಖಂಡರು ದೂರ!

**ಪಿಟಿಐ** ವಾಷಿಂಗ್ಟನ್

ಭಾರತದಲ್ಲಿ ಕುಟುಂಬ ರಾಜಕಾರಣ ಒಂದು ಸಮಸ್ಯೆಯಾಗಿದ್ದು, ಕಾಂಗ್ರೆಸ್‌ನ ಬಹುತೇಕ ರಾಜಕಾರಣಿಗಳು ಕುಟುಂಬ ರಾಜಕಾರಣದಿಂದ ದೂರವಿದ್ದಾರೆ ಎಂದು ಎಐಸಿಸಿ ಉಪಾಧ್ಯಕ್ಷ ರಾಹುಲ್ ಗಾಂಧಿ ಮಂಗಳವಾರ ಹೇಳಿದ್ದಾರೆ.



ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ 'ಭಾರತಕ್ಕೆ 70 ವರ್ಷ' ಕಾರ್ಯಕ್ರಮದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಭಾರತದ ಬಹುತೇಕ ಪಕ್ಷಗಳಲ್ಲಿ ಕುಟುಂಬ ರಾಜಕಾರಣವಿದೆ. ಡಿಎಂಕೆಯ ಎಂ.ಕೆ. ಸ್ಟಾಲಿನ್, ಎಸ್‌ಪಿಯ ಅಖಿಲೇಶ್ ಯಾದವ್ ಕುಟುಂಬ ರಾಜಕಾರಣದಿಂದಾಗಿ ಬಂದವರಾಗಿದ್ದಾರೆ. ನಟ ಅಭಿಷೇಕ್ ಬಚ್ಚನ್ ಮತ್ತು ಉದ್ಯಮಿಗಳಾದ ಅಂಬಾನಿ ಸಹೋದರರೂ ಕುಟುಂಬದಿಂದಾಗಿ ಪ್ರಸಿದ್ಧರಾಗಿದ್ದಾರೆ. ಭಾರತದಲ್ಲಿ ಕುಟುಂಬದ ಬೆಂಬಲದಿಂದಲೇ ಮುಂದುವರಿಯುವುದು ಸಾಮಾನ್ಯವಾಗಿದೆ. ಆದರೆ ನನ್ನ ಪಕ್ಷದ ಹೆಚ್ಚಿನ ರಾಜಕಾರಣಿಗಳು ಕುಟುಂಬ ರಾಜಕಾರಣದಿಂದ ದೂರವಿದ್ದಾರೆ' ಎಂದಿದ್ದಾರೆ.

ಕಾಶ್ಮೀರಕ್ಕೆ ಸಂಬಂಧಿಸಿ ಕೇಂದ್ರ ಸರಕಾರದ ವಿರುದ್ಧ ಹರಿಹಾಯ್ದ ರಾಹುಲ್, 'ಕಾಶ್ಮೀರದಲ್ಲಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಯುಪಿಎ ಸರಕಾರ ಒಂಬತ್ತು ವರ್ಷ ಪ್ರಯತ್ನಿಸಿದ್ದು, ಈಗಿನ ಕೇಂದ್ರ ಸರಕಾರ ಅವೆಲ್ಲವನ್ನೂ ಕೇವಲ 30 ದಿನಗಳಲ್ಲಿ ಹಾಳು ಮಾಡಿದೆ. ಕಾಶ್ಮೀರ ಪ್ರವೇಶಿಸಲು ಕೇಂದ್ರ ಸರಕಾರವು ಭಯೋತ್ಪಾದಕರಿಗೆ ಮುಕ್ತ ಅವಕಾಶ ನೀಡುತ್ತಿದ್ದು, ಇದರಿಂದ ಅಲ್ಲಿ ಹಿಂಸಾಚಾರ ಹೆಚ್ಚಾಗುತ್ತಿದೆ' ಎಂದು ಟೀಕಿಸಿದ್ದಾರೆ.

'ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಾಗೂ ನೋಟ್ಯಂತರವನ್ನು ಕೇಂದ್ರ ಸರಕಾರ ತರಾತುರಿಯಲ್ಲಿ ಜಾರಿಗೆ ತಂದಿದೆ. ಇದರಿಂದಾಗಿ ದೇಶದ ಆರ್ಥಿಕತೆಗೆ ಭಾರಿ ಹಿನ್ನಡೆಯಾಗಿದೆ. ರು. 500 ಮತ್ತು 1000 ಮುಖಬೆಲೆಯ ನೋಟು ನಿಷೇಧಿಸಿದ್ದರಿಂದ ಜಿಡಿಪಿಯಲ್ಲಿ ಶೇ. 2ರಷ್ಟು ಕಡಿತವಾಗಿದೆ' ಎಂದು ರಾಹುಲ್ ಹೇಳಿದ್ದಾರೆ.

ದೇಶದಲ್ಲಿ ಯಾರೂ ರಾಹುಲ್ ಭಾಷಣವನ್ನು ಕೇಳದ ಕಾರಣ, ಅಮೆರಿಕನ್ನರಿಗೆ ತಮ್ಮ ವ್ಯಥೆಯನ್ನು ವಿವರಿಸಿದ್ದಾರೆ. ಕಾಂಗ್ರೆಸ್‌ನಲ್ಲೇ ಕುಟುಂಬ ರಾಜಕಾರಣ ಹೆಚ್ಚಾಗಿದ್ದು, ಸೋನಿಯಾ ಪುತ್ರ ರಾಹುಲ್ ಅವರೇ ಮುಂದಿನ ಕಾಂಗ್ರೆಸ್ ಅಧ್ಯಕ್ಷರೆಂದು ಎಲ್ಲರಿಗೂ ತಿಳಿದಿದೆ.
- **ಸ್ಮೃತಿ ಇರಾನಿ**
ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವೆ

# ಐಸಿಸ್ ಕಪಿಮುಷ್ಟಿಯಿಂದ ಕ್ರೈಸ್ತ ಪಾದ್ರಿಯ ರಕ್ಷಣೆ

**ಪಿಟಿಐ** ದೆಹಲಿ

ಕಳೆದ ವರ್ಷ ಯೆಮೆನ್‌ನಲ್ಲಿ ಐಸಿಸ್ ಉಗ್ರರಿಂದ ಅಪಹರಣಕ್ಕೀಡಾಗಿದ್ದ ಕೇರಳ ಮೂಲದ ಕ್ರೈಸ್ತ ಪಾದ್ರಿಯೊಬ್ಬರನ್ನು ರಕ್ಷಿಸಲಾಗಿದೆ.

'ಕೇರಳದ ಪಾದ್ರಿ ಟಾಮ್ ಉಝುನ್ನಳಿಲ್‌ರನ್ನು ರಕ್ಷಣೆ ಮಾಡಲಾಗಿದೆ ಎಂದು ತಿಳಿಸಲು ಸಂತಸವಾಗುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವೆ ಸುಷ್ಮಾ ಸ್ವರಾಜ್ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷದ ಮಾರ್ಚ್ 4ರಂದು ಯೆಮೆನ್‌ನ ಅಡೆನ್‌ನಲ್ಲಿರುವ ಕ್ರೈಸ್ತ ಮಿಷನರಿಗಳ ವೃದ್ಧಾಶ್ರಮದ ಮೇಲೆ ದಾಳಿ ಮಾಡಿದ್ದ ಉಗ್ರರು ಟಾಮ್‌ರನ್ನು ಅಪಹರಿಸಿದ್ದರು. ಈ ದಾಳಿಯಲ್ಲಿ 16 ಜನ ಮೃತಪಟ್ಟಿದ್ದರು. ಟಾಮ್ ಉಝುನ್ನಳಿಲ್ ಕೇರಳದ ಕೊಟ್ಟಾಯಂ ಜಿಲ್ಲೆಯ ರಾಮಪುರಂನವರು.

ಪ್ರಸಕ್ತ ವರ್ಷದ ಮೇನಲ್ಲಿ ಟಾಮ್ ತನ್ನ ರಕ್ಷಣೆ ಕುರಿತು ಮನವಿ ಮಾಡಿದ್ದ ಐದು ನಿಮಿಷದ ವಿಡಿಯೊ ಯೂಟ್ಯೂಬ್‌ನಲ್ಲಿ ಹರಿದಾಡುತ್ತಿತ್ತು. ಭಾರತದ ಮನವಿ ಮೇರೆಗೆ ಯೆಮೆನ್ ಸರಕಾರ ಮಧ್ಯಸ್ಥಿಕೆ ವಹಿಸಿ ಟಾಮ್‌ರನ್ನು ಐಸಿಸ್ ಉಗ್ರರಿಂದ ಬಂಧಮುಕ್ತಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

### ಭಾರತಕ್ಕೆ ಹೇಗೆ ಕರೆತರಲಾಗುತ್ತದೆ?

ಯೆಮೆನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಅಧಿಕಾರಿಗಳು ಟಾಮ್ ಉಝುನ್ನಳಿಲ್‌ರನ್ನು ಭೇಟಿ ಮಾಡಿದ್ದು, ಯೆಮೆನ್‌ನಿಂದ ಮಸ್ಕಟ್‌ಗೆ ಕರೆತರಲಾಗುತ್ತದೆ. ಬಳಿಕ ಟಾಮ್ ವಿಮಾನದಲ್ಲಿ ಕೇರಳಕ್ಕೆ ಆಗಮಿಸಲಿದ್ದಾರೆ ಎಂದು ತಿಳಿದುಬಂದಿದೆ.



ದೇವರ ಕೃಪೆಯಿಂದ ಬದುಕುಳಿದೆ. ನನ್ನ ರಕ್ಷಣೆಗೆ ನಿಂತ ಎಲ್ಲರಿಗೂ ಧನ್ಯವಾದ.
- **ಟಾಮ್ ಉಝುನ್ನಳಿಲ್**
ಅಪಹೃತ ಕ್ರೈಸ್ತ ಪಾದ್ರಿ

ಕೊನೆಗೂ ನಮ್ಮ ಪ್ರಾರ್ಥನೆ ದೇವರಿಗೆ ಕೇಳಿಸಿತು. ಟಾಮ್ ರಕ್ಷಣೆಗೆ ಸಹಕರಿಸಿದ ಎಲ್ಲರಿಗೂ ಪ್ರಣಾಮ.
- **ಮ್ಯಾಥ್ಯೂ** ಟಾಮ್ ಸಹೋದರ

# ಶರಣಾದ ಸಿರಿಮನೆಗೇಕೆ ಮತ್ತೆ ನಕ್ಸಲರ ಹಂಗಿನ ಅರಮನೆ?

**ಲಕ್ಷ್ಮೀಸಾಗರ ಸ್ವಾಮಿಗೌಡ** ಬೆಂಗಳೂರು

ಪ್ರಭುತ್ವದ ವಿರುದ್ಧ ಸಮರ ಸಾರಿ ಶಸ್ತ್ರ ಹಿಡಿದು ಕಾಡಿಗೆ ಹೋಗಿದ್ದವರಿವರು. ಕಡೆಗೆ ಅದು ಸಾಧ್ಯವಾಗದಿದ್ದಾಗ ಶಸ್ತ್ರ ಕೆಳಗಿಟ್ಟು ಸರಕಾರದ ಮುಂದೆ ಮಂಡಿಯೂರಿ ಶರಣಾಗಿದ್ದರು. ಈಗ ಮತ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ತಮ್ಮ ಹಳೆಯ ಭೂಗತ ಸಂಗಾತಿಗಳ ಪರವಾಗಿ ಮಾಧ್ಯಮಗಳ ಮುಂದೆ ವಕಾಲತ್ತು ವಹಿಸಿದರೆ ಅವರ ಶರಣಾಗತಿಗೆ ಅರ್ಥ ಬರುತ್ತದೆಯೇ? ಇಂತಹದೊಂದು ಪ್ರಶ್ನೆ ಈಗ ಸಾರ್ವಜನಿಕರನ್ನು ಕಾಡುತ್ತಿದೆ.

ಕೇವಲ ಒಂದೂವರೆ ವರ್ಷದ ಹಿಂದಿನ ಮಾತು. ಅಂದು ಚಿಕ್ಕಮಗಳೂರು ಜಿಲ್ಲಾಧಿಕಾರಿ ಮತ್ತು ಎಸ್ಪಿಯವರ ಮುಂದೆ ಮಂಡಿಯೂರಿ ಶರಣಾದ ರಾಜ್ಯ ಪೊಲೀಸರ ಪ್ರಕಾರ ಅವರ ಸುಳಿವಿಗೆ ಬಹುಮಾನ ಘೋಷಿಸಿದ್ದ ನಕ್ಸಲ್ ಸಂಘಟನೆಯ ಸದಸ್ಯರಾದ ಸಿರಿಮನೆ ನಾಗರಾಜು ಮತ್ತು ನೂರ್ ಜುಲ್ಫಿಕರ್ ಅಲಿಯಾಸ್ ನೂರ್ ಶ್ರೀಧರ್ ತಮಗೆ ಸಶಸ್ತ್ರ ಚಳವಳಿಯಲ್ಲಿ ನಂಬಿಕೆ ಇಲ್ಲ, ತಾವು ಆ ಚಳವಳಿಯಲ್ಲಿ ಭಾಗವಹಿಸಿಯೇ ಇಲ್ಲ, ನಾವು ರಾಜ್ಯದಲ್ಲಿ ಸಕ್ರಿಯವಾಗಿರುವ ನಕ್ಸಲ್ ಸಂಘಟನೆಯ ಪರ ಸಹಾನುಭೂತಿ ಹೊಂದಿದ್ದೆವು. ಆದರೆ, ಪೊಲೀಸರು ಭೂಗತ ನಕ್ಸಲರ ಜತೆ ನಮಗೂ ಸಂಬಂಧ ಕಲ್ಪಿಸಿ ನಮ್ಮ ತಲೆದಂಡಕ್ಕೆ ಮುಂದಾದಾಗ ನಾವು ಅನಿವಾರ್ಯವಾಗಿ ಭೂಗತರಾಗಬೇಕಾಯಿತು. ಈಗ ಸರಕಾರ ನಮಗೆ ಕ್ಷಮಾದಾನ ನೀಡುತ್ತಿರುವುದರಿಂದ ನಾವು ಆ ಸಂಘಟನೆಯ ಸಂಪರ್ಕ ಕಡಿದುಕೊಂಡು ಹೊರಬಂದು ಸಮಾಜದ ಮುಖ್ಯವಾಹಿನಿ ಸೇರುತ್ತಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗೆ ನ್ಯಾಯ ಸಿಗುವ ನಂಬಿಕೆ ಇದೆ ಎಂದು ಹೇಳಿದ್ದರು.


ಎದಿರೇಟು

ಆ ನಂತರ ಬಹುತೇಕ ಬೆಂಗಳೂರಿನಲ್ಲಿ ನಡೆದ ಪ್ರಗತಿಪರ ಹೋರಾಟಗಳಲ್ಲಿ, ದೃಶ್ಯ ಮಾಧ್ಯಮಗಳ ಚರ್ಚೆಯಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ನಾವು ಸಶಸ್ತ್ರ ಹೋರಾಟದಿಂದ ದೇಶದಲ್ಲಿ ಸಮಸಮಾಜ ನಿರ್ಮಿಸಲು ಸಾಧ್ಯ ಎಂಬ ಸಿದ್ಧಾಂತದಲ್ಲಿ ನಂಬಿಕೆ ಇಟ್ಟವರಲ್ಲ. ಕರ್ನಾಟಕದಂತಹ ಅತಿ ಸಣ್ಣ ಭೂಹಿಡುವಳಿ ಹೊಂದಿರುವ ರಾಜ್ಯದಲ್ಲಿ ಅಂತಹ ಹೋರಾಟ ಸಾಧ್ಯವೂ ಇಲ್ಲ. ಹಾಗಾಗಿ ರಾಜ್ಯದಲ್ಲಿ ನಕ್ಸಲ್ ಚಳವಳಿ ವಿಫಲವಾಗಿದೆ. ಮಲೆನಾಡಿನ ಆದಿವಾಸಿಗಳಾಗಲೀ, ಅರಣ್ಯದಂಚಿನ ಕೃಷಿಕರಿಗಾಗಲಿ ಈ ಚಳವಳಿಯ ಬಗ್ಗೆ ನಂಬಿಕೆ ಇಲ್ಲ. ನಾವು ಸಹ ಶಸ್ತ್ರ ಹಿಡಿದು ಹೋರಾಟ ಮಾಡಿದವರಲ್ಲ. ಅದೊಂದು ರೀತಿ ನಮಗೂ ಮಲೆನಾಡಿನ ಅರಣ್ಯದಲ್ಲಿ ಸಕ್ರಿಯರಾಗಿದ್ದ ನಕ್ಸಲರಿಗೂ ಸಂಬಂಧವೇ ಇಲ್ಲವೆಂದು ಅವರು ಮಾತನಾಡಿದ್ದರು.

ಗೌರಿ ಲಂಕೇಶ್ ಸೆ.5ರಂದು ದುಷ್ಕರ್ಮಿಗಳ ಗುಂಡಿಗೆ ಬಲಿಯಾದ ಕೆಲವೇ ನಿಮಿಷಗಳಲ್ಲಿ ಅವರ ಶವವಿನ್ನೂ ಮನೆಯ ಆವರಣದಲ್ಲಿರುವಾಗಲೇ ಅಲ್ಲಿ ಜಮಾಯಿಸಿದ ಪ್ರಗತಿಪರ ಸಂಘಟನೆಯ ಸದಸ್ಯರು ಪೊಲೀಸರು ತನಿಖೆ ಆರಂಭಿಸುವ ಮುಂಚೆಯೇ ಸಂಘಪರಿವಾರ ಮತ್ತು ಪ್ರಧಾನಿ ಮೋದಿಯವರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಇಡೀ ಪ್ರಕರಣದ ತನಿಖೆ ಕೋಮುವಾದಿ ಸಂಘ- ಪರಿವಾರದ ಕಡೆ ತಿರುಗಿಸುವ ಪ್ರಯತ್ನ ಮಾಡಿದ್ದರು.

→ 5

### ವಕ್ರತುಂಡೋಕ್ತಿ

ಫೇಸ್‌ಬುಕ್‌ನಲ್ಲಿ ಫ್ರೆಂಡ್ ರಿಕ್ವೆಸ್ಟ್ ಹಾವಳಿ ಹೆಚ್ಚಾಗಿದೆಯೆಂದು ಅಲವತ್ತುಕೊಳ್ಳುವ ಹುಡುಗಿಯರು ಅವರ ನಿಜವಾದ ಫೋಟೊ ಹಾಕಿದರೆ ಶೇ.80ರಷ್ಟು ಹಾವಳಿ ಕಡಿಮೆಯಾಗುತ್ತದೆ.

IAS, KAS, PSI, FDA/SDA, CET, Bank, PC ಇತ್ಯಾದಿ ಪರೀಕ್ಷೆಗಳ ತಯಾರಿಗೆ
ರಾಜ್ಯದ ನಂ.1 ಮಾಸಪತ್ರಿಕೆ
ಸ್ಪರ್ಧಾ ಸ್ಫೂರ್ತಿ
ಕನ್ನಡ ಮಾಸಪತ್ರಿಕೆ
2017ರ ಸೆಪ್ಟೆಂಬರ್ ಸಂಚಿಕೆ ಈಗ ರಾಜ್ಯಾದ್ಯಂತ ಲಭ್ಯ
• ಮುಂಬರುವ ಪರೀಕ್ಷೆಗಳಿಗೆ ಅಧ್ಯಯನ ಸಾಮಗ್ರಿ
• ಆಗಸ್ಟ್ 20ರಂದು ನಡೆದ ಕೆ.ಎ.ಎಸ್. ಪರೀಕ್ಷೆಯ ಪ್ರಶ್ನೆಪತ್ರಿಕೆ ಉತ್ತರ ಸಹಿತ & 4 ಸಾಧಕರ ಸಂದರ್ಶನ
• ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಪ್ರಚಲಿತ ಘಟನೆಗಳು
ಈ ಸಂಚಿಕೆಯೊಂದಿಗೆ KAS ಮುಖ್ಯ ಪರೀಕ್ಷೆಯ ಸಿದ್ಧತೆಗೆ ಹಿಂದಿನ ಪ್ರಶ್ನೆ ಪತ್ರಿಕೆಗಳು ಹಾಗೂ ಮಾರ್ಗದರ್ಶನದ ಉಚಿತ ಕೈಪಿಡಿ ಕೇಳಿ ಪಡೆಯಿರಿ
Spardha Spoorti Publishers & Printers Pvt. Ltd.